ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಆಳಂದ	130	78	52
ಸಾಮಾಜಿಕ ಅರಣ್ಯ ಇಲಾಖೆ	14	–	14
ಸಮಾಜ ಕಲ್ಯಾಣ ಇಲಾಖೆ	04	02	02
ರೇಷ್ಮೆ ಇಲಾಖೆ	07	01	06
ಒಟ್ಟು	**155**	**81**	**74**

ಇ) ದಿನಗೂಲಿ ನೌಕರರಿಗೆ ಯಾವುದೇ ಕೆಲಸವಿಲ್ಲದೆ ಇದ್ದ ಪಕ್ಷದಲ್ಲಿ ಅಂಥವರನ್ನು ಬೇರೆ ಇಲಾಖೆಗಳಿಗೆ ವ್ಯಂದವಾರು ಕೆಲಸಕ್ಕೆ ತೆಗೆದುಕೊಳ್ಳಲಾಗುವುದೇ?

ಬೇರೆ ಇಲಾಖೆಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

ಕರ್ನಾಟಕ ವಿಧಾನ ಸಭೆ
13ನೇ ವಿಧಾನ ಸಭೆ
3ನೇ ಅಧಿವೇಶನ

228 ಶ್ರೀ. ಶ್ರೀನಿವಾಸ್. ಎಂ (ಮಂಡ್ಯ)
ಸಿ.ಎಂ.ಉದಾಸಿ ಲೋಕೋಪಯೋಗಿ ಸಚಿವರು

ಅ) ಮದ್ದೂರು ತಾಲ್ಲೂಕು ಕೌಡ್ಲೆಯಿಂದ ಮಂಡ್ಯ ನಗರ ಜಿಲ್ಲಾ ಮುಖ್ಯ ರಸ್ತೆಯನ್ನು ಉನ್ನತೀಕರಿಸಿ ಕೆಶಿಪ್ (1) ರಲ್ಲಿ ವಿಶ್ವಬ್ಯಾಂಕ್ ಸಹಾಯದಿಂದ ಕಾಮಗಾರಿ ಪ್ರಾರಂಭಿಸಲು ಸರಕಾರ ತೀರ್ಮಾನಿಸಿದ್ದು ನಿಜವಲ್ಲವೇ;

ಮಂಡ್ಯ–ಕೌಡ್ಲೆ ವರೆಗಿನ 33.80 ಕಿ.ಮೀ ಉದ್ದದ ರಸ್ತೆಯ ಉನ್ನತೀಕರಣದ ಕಾಮಗಾರಿಯನ್ನು ಕೆಶಿಪ್–2 ಯೋಜನೆಯ ಪಟ್ಟಿಯಲ್ಲಿ ಸೇರಿಸಲಾಗಿದೆ.

ಆ) ಹಾಗಿದ್ದಲ್ಲಿ, ಈ ರಸ್ತೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ;

ಇನ್ನೂ ಪ್ರಾರಂಭವಾಗಿರುವುದಿಲ್ಲ.

ಇ) ಕಾಮಗಾರಿಗಾಗಿ ಪೂರ್ಣ ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ;

ಯಾವುದೇ ಅನುದಾನ ಸದರಿ ಕಾಮಗಾರಿಗೆ ಬಿಡುಗಡೆಯಾಗಿರುವುದಿಲ್ಲ.

ಈ) ಹಾಗಿಲ್ಲದಿದ್ದಲ್ಲಿ, ಯಾವಾಗ ಅನುದಾನವನ್ನು ಬಿಡುಗಡೆ ಮಾಡಲಾಗುವುದು ಮತ್ತು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಸದರಿ ಕಾಮಗಾರಿಗಳನ್ನು ಯೋಜನೆಯ ಮುಂದಿನ ಹಂತಗಳಲ್ಲಿ ಆರ್ಥಿಕ ಸಂಪನ್ಮೂಲ ಲಭ್ಯತೆಯ ಅನುಸಾರ ಕೈಗೊಳ್ಳಲಾಗುವುದು.

13ನೇ ವಿಧಾನಸಭೆ 3ನೇ ಅಧಿವೇಶನ

229 ಶ್ರೀಶ್ರೀನಿವಾಸ್. ಎಂ(ಮಂಡ್ಯ)
ಲೋಕೋಪಯೋಗಿ ಸಚಿವರು

ಅ) ಲೋಕೋಪಯೋಗಿ ಇಲಾಖೆಯಲ್ಲಿನ ಕೆಶಿಪ್–II ಯೋಜನೆಯಡಿ, ಮೊದಲನೇ ಹಂತದಲ್ಲಿ (ವಿಶ್ವಬ್ಯಾಂಕಿನ ಅನುದಾನ) ಹಿಂದಿನ ಸರಕಾರ ಕೈಗೆತ್ತಿಕೊಳ್ಳಲಾದ ರಸ್ತೆ ಉದ್ದ ಮತ್ತು ಕಾಮಗಾರಿಗಳ ಸಂಖ್ಯೆ ಎಷ್ಟು; (ಕಾಮಗಾರಿವಾರು ವಿವರ ನೀಡುವುದು);

ಕೆಶಿಫ್–2 ರ ಮೊದಲನೇ ಹಂತದಲ್ಲಿ ಹಿಂದಿನ ಸರ್ಕಾರದಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

ಆ) ಈ ರಸ್ತೆಗಳ ಆಯ್ಕೆಯನ್ನು ಯಾವ ಮಾನದಂಡ ಉಪಯೋಗಿಸಿ ಆಯ್ಕೆ ಮಾಡಲಾಗಿದೆ (ವಿವರಗಳನ್ನು ನೀಡುವುದು);

ಕೆಶಿಫ್–2ರ ಯೋಜನೆ ರಸ್ತೆಗಳನ್ನು ವಿಶ್ವಬ್ಯಾಂಕಿನ ಮಾರ್ಗಸೂಚಿ ಅನ್ವಯ ಅಧ್ಯಯನಗಳ ಮೂಲಕ ಆಯ್ಕೆ ಮಾಡಲಾಗಿದೆ. ವಿವರಗಳು ಕೆಳಕಂಡಂತಿವೆ.

ರಸ್ತೆಗಳನ್ನು ಶೇಕಡ 80 ರಷ್ಟು ಆದ್ಯತೆಯನ್ನು ವಾಹನಗಳ ಸಂಚಾರ ಸಾಂಧ್ರತೆಯನ್ನು ಆಧರಿಸಿ ಮತ್ತು ಶೇಕಡ 20 ರಷ್ಟು ಆದ್ಯತೆಯನ್ನು ಪ್ರಾದೇಶಿಕ ಅಸಮಾನತೆ ಪರಿಹಾರಕ್ಕಾಗಿ ರಚಿಸಿರುವ ಡಾ:ನಂಜುಂಡಪ್ಪ ಸಮಿತಿಯ ವರದಿಯಲ್ಲಿನ ಸೂಚ್ಯಂಕಕ್ಕೆ ನೀಡುವ ಮೂಲಕ ಹಾಗೂ ಅಂತಿಮವಾಗಿ ಕನಿಷ್ಟ ಶೇಕಡ 12 ರಷ್ಟು ಆಂತರಿಕ ಆರ್ಥಿಕ ಪ್ರತಿಫಲ ನೀಡುವ ರಸ್ತೆಗಳನ್ನು ಗಣನೆಗೆ ತೆಗೆದುಕೊಂಡು ಆಯ್ಕೆ ಮಾಡಲಾಗಿದೆ.

ಇ) ಇದರ ಒಟ್ಟು ಅಂದಾಜು ಮೊತ್ತವೆಷ್ಟು; (ಕಾಮಗಾರಿವಾರು ವಿವರ ನೀಡುವುದು);

ಕೆಶಿಫ್–2 ರ ಯೋಜನೆಯ 3411 ಕಿ.ಮೀ.ಗಳ ಅಂದಾಜು ಮೊತ್ತ 9500 ಕೋಟಿ ರೂ.ಎಂದು ಅಂದಾಜಿಸಲಾಗಿದೆ.

ಈ) ಈ ಯೋಜನೆಯಡಿ ಮಂಡ್ಯ–ಕೌಡ್ಲೆ ಹಾಗೂ ಹಾಸನ–ಅರಕಲಗೂಡು ರಸ್ತೆ ಕಾಮಗಾರಿಗಳನ್ನು ಕೈಬಿಡಲಾಗಿರುವುದು ನಿಜವೇ; ಹಾಗಿದ್ದಲ್ಲಿ ಕಾರಣಗಳೇನು;

ಮಂಡ್ಯ–ಕೌಡ್ಲೆ ಹಾಗೂ ಹಾಸನ–ಅರಕಲಗೂಡು ರಸ್ತೆಗಳು ಕೆಶಿಫ್ –2 ಯೋಜನೆಯಡಿಯಲ್ಲಿ 3411 ಕಿ.ಮೀ.ಗಳ ರಸ್ತೆ ಪಟ್ಟಿಯಲ್ಲಿ ಸೇರಿರುತ್ತವೆ.

ಉ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮೇಲಿನ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು ಹಾಗೂ ಎಂದಿನಿಂದ ತೆಗೆದುಕೊಳ್ಳಲಾಗುವುದು?